ದ್ವಿತೀಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ ಮಾರ್ಚ್ :2024–25

# 9ನೆಯ ತರಗತಿ ಪ್ರಥಮ ಭಾಷೆ ಕನ್ನಡ

# ಪ್ರಶ್ನೆ ಪತ್ರಿಕೆಯ ನೀಲ ನಕಾಶೆ
# ಮತ್ತು
# ಪ್ರಶ್ನೆ ಪತ್ರಿಕೆ

ಬಸವರಾಜ.ಟಿ.ಎಂ
ಕನ್ನಡ ಭಾಷಾ ಶಿಕ್ಷಕರು
ಬಾಲಕಿಯರ ಸರ್ಕಾರಿ ಪ್ರೌಢಶಾಲೆ,
ಹರಪನಹಳ್ಳಿ, ವಿಜಯನಗರ ಜಿಲ್ಲೆ

# ದ್ವಿತೀಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ ಮಾರ್ಚ್ : 2024–25

## 9ನೆಯ ತರಗತಿ
## ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

# ವಿಷಯ : ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕಗಳು : 100** **ಅವಧಿ : 3ಗಂಟೆ 15.ನಿ**

**01.ಉದ್ದಿಷ್ಟಾನುಸಾರ ಪ್ರಾಮುಖ್ಯತೆ :**

| ಉದ್ದಿಷ್ಟಗಳು | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| ಸ್ಮರಣೆ | 21 | 21 | 14 |
| ಗ್ರಹಿಕೆ | 36 | 36 | 19 |
| ಅಭಿವ್ಯಕ್ತಿ | 39 | 39 | 11 |
| ಪ್ರಶಂಸೆ | 04 | 04 | 01 |
| ಒಟ್ಟು | 100 | 100 | 45 |

**02.ಪ್ರಶ್ನಾನುಸಾರ ಪ್ರಾಮುಖ್ಯತೆ :**

| ಪ್ರಶ್ನೆಗಳ ವಿಧಗಳು | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| ವಸ್ತುನಿಷ್ಠ | 10 | 10 | 10 |
| ಕಿರು ಉತ್ತರಗಳು (1) | 07 | 07 | 07 |
| ಕಿರು ಉತ್ತರಗಳು (2) | 20 | 20 | 10 |
| ದೀರ್ಘ ಉತ್ತರಗಳು (1) | 33 | 33 | 11 |
| ದೀರ್ಘ ಉತ್ತರಗಳು (2) | 20 | 20 | 05 |
| ದೀರ್ಘ ಉತ್ತರಗಳು (3) | 10 | 10 | 02 |
| ಒಟ್ಟು | 100 | 100 | 45 |

**03.ಕಠಿಣತೆಯ ಮಟ್ಟ :**

| ಕಠಿಣತೆಯ ಮಟ್ಟ | ಸುಲಭ | ಸಾಧಾರಣ | ಕಠಿಣ | ಒಟ್ಟು |
|---|---|---|---|---|
| ಅಂಕಗಳು | 30 | 50 | 20 | 100 |
| ಪ್ರಶ್ನೆಗಳು | 21 | 19 | 05 | 45 |
| ಪ್ರತಿಶತ | 30% | 50% | 20% | 100% |

04.ವಿಷಯಾನುಸಾರ ಪ್ರಾಮುಖ್ಯತೆ :

| ವಿಷಯ/ ಉಪಘಟಕ | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳು |
|---|---|---|---|
| ಗದ್ಯ | 28 | 28 | 13 |
| ಪದ್ಯ | 30 | 30 | 11 |
| ಪಠ್ಯ ಪೋಷಕ ಅಧ್ಯಯನ | 09 | 09 | 05 |
| ಅಪಠಿತ ಗದ್ಯ | 04 | 04 | 01 |
| ವ್ಯಾಕರಣಾಂಶಗಳು, ಛಂದಸ್ಸು, ಅಲಂಕಾರ ಮತ್ತು ವಾಕ್ಯ ರಚನೆ | 29 | 29 | 15 |
| ಒಟ್ಟು | 100 | 100 | 45 |

05. ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.

1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಪ್ರಜಾನಿಷ್ಠೆ | 03 | 01 |
| 2 | ಬೆಡಗಿನ ತಾಣ ಜಯಪುರ | 04 | 02 |
| 3 | ರಾಮರಾಜ್ಯ | 03 | 02 |
| 4 | ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ | 04 | 02 |
| 5 | ಜನಪದ ಕಲೆಗಳ ವೈಭವ | 04 | 01 |
| 6 | ಅಧಿಕಾರ | 04 | 02 |
| 7 | ನಾನು ಕಂಡಂತೆ ಬಿ ಜೆ ಎಲ್ ಸ್ವಾಮಿ | 03 | 02 |
| 8 | ಹರಲೀಲೆ | 03 | 01 |
| | ಗದ್ಯ ಒಟ್ಟು | 28 | 13 |

2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಪಾರಿವಾಳ | 03 | 01 |
| 2 | ಹೊಸಹಾಡು | 04 | 01 |
| 3 | ಚಕ್ರಗ್ರಹಣ | 03 | 01 |
| 4 | ಬಲಿಯನಿತ್ತೊಡೆ ಮುನಿವೆಂ | 04 | 02 |
| 5 | ಹೇಮಂತ | 04 | 01 |
| 6 | ತತ್ತ್ವಪದಗಳು | 04 | 01 |
| 7 | ನಿನ್ನ ಮುತ್ತಿನ ಸತ್ತಿಗೆಯನ್ನಿತ್ತು ಸಲಹು | 04 | 02 |
| 8 | ಕನ್ನಡ ನಾಡು ನುಡಿ | 04 | 02 |
| | ಪದ್ಯ ಒಟ್ಟು | 30 | 11 |

## 3. ಪಠ್ಯಪೋಷಕ ಅಧ್ಯಯನ

| ಕ್ರ.ಸಂ | ಪಾಠದ ಹೆಸರು | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಪುಟ್ಟಹಕ್ಕಿ | 02 | 01 |
| 2 | ಚೆನ್ನಾಬೈರಾದೇವಿ | 02 | 01 |
| 3 | ಸಿರಿಯನಿನ್ನೇನ ಬಣ್ಣಿಪೆನು | 02 | 01 |
| 4 | ನನ್ನಾಸೆ | 02 | 01 |
| 5 | ಉರಿದ ಬದುಕು | 01 | 01 |
| 6 | ಗುಣಸಾಗರಿ ಪಂಡರೀಬಾಯಿ | -- | -- |
| | ಪಠ್ಯ ಪೋಷಕ ಅಧ್ಯಯನ ಒಟ್ಟು | 09 | 05 |

## 4. ಅಪಠಿತ ಗದ್ಯ

| ಕ್ರ.ಸಂ | ವಿಷಯ | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಅಪಠಿತ ಗದ್ಯ | 04 | 01 |

## 5. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ಪಾಠದ ಹೆಸರು | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ವ್ಯಾಕರಣಾಂಶಗಳು | 10 | 10 |
| 2 | ಅಲಂಕಾರ | 03 | 01 |
| 3 | ಛಂದಸ್ಸು | 03 | 01 |
| 4 | ಗಾದೆ ಮಾತು | 03 | 01 |
| 5 | ಪತ್ರಲೇಖನ | 05 | 01 |
| 6 | ಪ್ರಬಂಧ ರಚನೆ | 05 | 01 |
| | ಒಟ್ಟು | 29 | 16 |

# ಪ್ರಶ್ನೆ ಪತ್ರಿಕೆ ಅಂಕ ವಿತರಣೆ

**ಗದ್ಯ : 28, ಪದ್ಯ : 30, ಪಠ್ಯ ಪೋಷಕ ಅಧ್ಯಯನ : 09, ಅಪಠಿತ ಗದ್ಯ 04,
ವ್ಯಾಕರಣ, ಅಲಂಕಾರ, ಛಂದಸ್ಸು ಮತ್ತು ವಾಕ್ಯರಚನೆ : 29 ಒಟ್ಟು : 100**

| ಪ್ರಶ್ನೆಗಳ ಸ್ವರೂಪ | ಗದ್ಯ | ಪದ್ಯ | ಪೋಷಕ ಅಧ್ಯಯನ | ಅಪಠಿತ ಗದ್ಯ | ವ್ಯಾಕರಣ | ವಾಕ್ಯ ರಚನೆ | ಒಟ್ಟು |
|---|---|---|---|---|---|---|---|
| 1. ಬಹು ಆಯ್ಕೆ | *** | *** | *** | *** | 6*1=6 | *** | 6*1=6 |
| 2. ಸಂಬಂಧೀಕರಿಸಿ ಬರೆಯುವುದು | *** | *** | *** | *** | 4*1=4 | *** | 4*1=4 |
| 3. ಒಂದು ವಾಕ್ಯದ ಉತ್ತರಗಳು | 4*1=4 | 2*1=2 | 1*1=1 | *** | *** | *** | 7*1=7 |
| 4. ಮೂರು ನಾಲ್ಕು ವಾಕ್ಯಗಳ ಉತ್ತರಗಳು | 4*2=8 | 2*2=4 | 4*2=8 | *** | *** | *** | 10*2=20 |
| 5. ಐದಾರು ವಾಕ್ಯಗಳ ಉತ್ತರಗಳು – ಸಂದರ್ಭಗಳು | 3*3=9 | 3*3=9 | *** | *** | *** | *** | 6*3=18 |
| 6. ಕವಿ ಕೃತಿ ಪರಿಚಯ | 1*3=3 | 1*3=3 | *** | *** | *** | *** | 2*3=6 |
| 7. ಕಂಠಪಾಠ ಪದ್ಯ | *** | 1*4=4 | *** | *** | *** | *** | 1*4=4 |
| 8. ಪದ್ಯವನ್ನು ಓದಿ ಅರ್ಥೈಸಿ ಕೊಂಡು, ಅಡಕಗೊಂಡ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು | *** | 1*4=4 | *** | *** | *** | *** | 1*4=4 |
| 9. ಎಂಟು/ಹತ್ತು ವಾಕ್ಯಗಳ ಉತ್ತರಗಳು | 1*4=4 | 1*4=4 | *** | *** | *** | *** | 2*4=8 |
| 10. ಅಪಠಿತ ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು. | *** | *** | *** | 1*4=4 | *** | *** | 1*4=4 |
| 11. ಛಂದಸ್ಸು | *** | *** | *** | *** | 1*3=3 | *** | 1*3=3 |
| 12. ಅಲಂಕಾರ | *** | *** | *** | *** | 1*3=3 | *** | 1*3=3 |
| 13. ಗಾದೆಗಳು | *** | *** | *** | *** | *** | 1*3=3 | 1*3=3 |
| 14. ಪತ್ರ ಲೇಖನ | *** | *** | *** | *** | *** | 1*5=5 | 1*5=5 |
| 15. ಪ್ರಬಂಧ ರಚನೆ | *** | *** | *** | *** | *** | 1*5=5 | 1*5=5 |
| ಒಟ್ಟು ಅಂಕಗಳು | 28 | 30 | 09 | 04 | 16 | 13 | 100 |

# 9 ನಯ ತರಗತಿ ಪ್ರಥಮ ಭಾಷ ಕನ್ನಡ – ದ್ವಿತೀಯ ಸಂಕಲನಾತ್ಮಕ ಮೌಲ್ಯಮಾಪನ ಪ್ರಶ್ನ ಪತ್ರಿಕೆಯ ನೀಲ ನಕಾಶ

| ಕ್ರ. ಸಂ | ಪಾಠದ ಹೆಸರು | ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | ಪ್ರಶಂಸೆ | ಒಟ್ಟು | | | | | | | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ.ಉ. 1 | ದೀ.ಉ. 1 | ದೀ.ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ. 1 | ದೀ ಉ. 2 | ದೀ ಉ. 1 | ದೀ.ಉ. 2 | ದೀ ಉ. 3 | ದೀ ಉ. 3 | ವ. ನಿ | ಕಿ.ಉ. 1 | ಕಿ.ಉ. 2 | ದೀ.ಉ. 1 | ದೀ.ಉ. 2 | ದೀ.ಉ. 3 | ಅಂಕಗಳು | |
| 1 | ಪ್ರಜಾನಿಷ್ಠೆ | | | | | | | | | | 1(3) | | | | | | | 1(3) | | | 03 | 01 |
| 2 | ಬೆಡಗಿನ ತಾಣ ಜಯಪುರ | | | 1(3) | | | 1(1) | | | | | | | | | 1(1) | | 1(3) | | | 04 | 02 |
| 3 | ರಾಮರಾಜ್ಯ | | 1(1) | | | | | 1(2) | | | | | | | | 1(1) | 1(2) | | | | 03 | 02 |
| 4 | ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ | | | | | | | 2(2) | | | | | | | | | 2(2) | | | | 04 | 02 |
| 5 | ಜನಪದ ಕಲೆಗಳ ವೈಭವ | | | | | | | | | | | 1(4) | | | | | | | 1(4) | | 04 | 01 |
| 6 | ಅಧಿಕಾರ | | 1(1) | | | | | | | | 1(3) | | | | | 1(1) | | 1(3) | | | 04 | 02 |
| 7 | ನಾನು ಕಂಡಂತೆ ಬಿ ಜಿ ಎಲ್ ಸ್ವಾಮಿ | | 1(1) | | | | | 1(2) | | | | | | | | | 1(2) | | | | 03 | 02 |
| 8 | ಹರಲೀಲೆ | | | | | | | | | | 1(3) | | | | | 1(1) | | | | | 03 | 01 |
| | ಗದ್ಯ ಒಟ್ಟು | | 3(1) | 1(3) | | | 1(1) | 4(2) | | | 3(3) | | | | | 4(1) | 4(2) | 3(3) | 1(4) | | 28 | 13 |
| 1 | ಪಾರಿವಾಳ | | | | | | | | | | 1(3) | | | | | | | 1(3) | | | 03 | 01 |
| 2 | ಹೊಸಹಾಡು | | | | 1(4) | | | | | | | | | | | | | | 1(4) | | 04 | 01 |
| 3 | ಚಕ್ರಗ್ರಹಣ | | | | | | | | | | 1(3) | | | | | | | 1(3) | | | 03 | 01 |
| 4 | ಬಲಿಯನಿತ್ತೊಡೆ ಮುನಿವೆಂ | | 1(1) | | | | | | | | 1(3) | | | | | 1(1) | | 1(3) | | | 04 | 02 |
| 5 | ಹೇಮಂತ | | | | | | | | | | | | | 1(4) | | | | | 1(4) | | 04 | 01 |
| 6 | ತತ್ತ್ವಪದಗಳು | | | | | | | | | | | 1(4) | | | | | | | 1(4) | | 04 | 01 |
| 7 | ನಿನ್ನ ಮುತ್ತಿನ ಸತ್ತಿಗೆಯನ್ನಿತ್ತು ಸಲಹು | | | 1(3) | | | 1(1) | | | | | | | | | 1(1) | | 1(3) | | | 04 | 02 |
| 8 | ಕನ್ನಡ ನಾಡು ನುಡಿ | | | | | | | 2(2) | | | | | | | | | 2(2) | | | | 04 | 02 |
| | ಪದ್ಯ ಒಟ್ಟು | | 1(1) | 1(3) | 1(4) | | 1(1) | 2(2) | | | 3(3) | | | | | 2(1) | 2(2) | 4(3) | 3(4) | | 30 | 11 |
| 1 | ಪುಟ್ಟಹಕ್ಕಿ | | | | | | | 1(2) | | | | | | | | | 1(2) | | | | 02 | 01 |
| 2 | ಚೆನ್ನಾಬೈರಾದೇವಿ | | | | | | | 1(2) | | | | | | | | | 1(2) | | | | 02 | 01 |
| 3 | ಸಿರಿಯನಿನ್ನೇನ ಬಣ್ಣಿಪೆನು | | | | | | | 1(2) | | | | | | | | | 1(2) | | | | 02 | 01 |
| 4 | ನನ್ನಾಸೆ | | | | | | | 1(2) | | | | | | | | 1(1) | | | | | 01 | 01 |
| 5 | ಉರಿದ ಬದುಕು | | 1(1) | | | | | | | | | | | | | | 1(2) | | | | 02 | 01 |
| 6 | ಗುಣಸಾಗರಿ ಪಂಡರೀಬಾಯಿ | | | | | | | | | | | | | | | | | | | | | |
| | ಪಠ್ಯಪೋಷಕ ಅಧ್ಯಯನ ಒಟ್ಟು | | 1(1) | | | | | 4(2) | | | | | | | | 1(1) | 4(2) | | | | 05 | 05 |
| | ಅಪಠಿತ ಗದ್ಯ ಒಟ್ಟು | | | | | | | | | 1(4) | | | | | | | | | 1(4) | | 04 | 01 |
| 1 | ವ್ಯಾಕರಣಾಂಶಗಳು | 6(1) | | | | 4(1) | | | | | | | | | 10(1) | | | | | | 10 | 10 |
| 2 | ಅಲಂಕಾರ | | | | | | | | 1(3) | | | | | | | | | | | | 03 | 01 |
| 3 | ಛಂದಸ್ಸು | | | | | | | | 1(3) | | | | | | | | | | | | 03 | 01 |
| 4 | ಗಾದೆಮಾತು | | | | | | | | | | 1(3) | | | | | | | | | | 03 | 01 |
| 5 | ಪತ್ರ ಬರೆಹ | | | | | | | | | | | | 1(5) | | | | | | | 1(5) | 05 | 01 |
| 6 | ಪ್ರಬಂಧ ಬರೆಹ | | | | | | | | | | | | 1(5) | | | | | | | 1(5) | 05 | 01 |
| | ಒಟು | 6(1) | | | | 4(1) | | | 2(3) | | 1(3) | | 2(5) | | 10(1) | 7(1) | 10(2) | 8(3) | 5(4) | 2(5) | 29 | 15 |
| | ಸಮಗ್ರ ಒಟು | 6(10) | 5(1) | 2(3) | 1(4) | 4(1) | 2(1) | 10(2) | 2(3) | 1(4) | 7(3) | 2(4) | 2(5) | 1(4) | 10(1) | 7(1) | 10(2) | 8(3) | 5(4) | 2(5) | 100 | 45 |
| ಸಮಗ್ರ ಅಂಕಗಳು | | 21 | | | | 36 | | | | | 39 | | | 4 | 100 | | | | | | | |

ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.

# ದ್ವಿತೀಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ ಮಾರ್ಚ್ : 2024–25
## ಪ್ರಥಮ ಭಾಷೆ ಕನ್ನಡ
## 9ನೇ ತರಗತಿ

**ಗರಿಷ್ಠ ಅಂಕಗಳು : 100** **ಅವಧಿ:3.ಗಂಟೆ 15 ನಿಮಿಷ**

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 6 X 1 = 6

**1.** ಕನ್ನಡ ವರ್ಣಮಾಲೆಯಲ್ಲಿನ ಸ್ವರಗಳ ಸಂಖ್ಯೆ

(ಎ) 49 (ಬಿ) 13

(ಸಿ) 25 (ಡಿ) 9

**2. 'ಅಂಗೈ'** –ಪದ ಈ ಸಮಾಸಕ್ಕೆ ಉದಾಹರಣೆ

(ಎ) ಅಂಶಿ ಸಮಾಸ (ಬಿ) ಕರ್ಮಧಾರೆಯ ಸಮಾಸ

(ಸಿ) ತತ್ಪುರುಷ ಸಮಾಸ (ಡಿ) ಬಹುವ್ರೀಹಿ ಸಮಾಸ

**3. 'ದೇವಾಲಯ'** ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಆಗಮಸಂಧಿ (ಬಿ) ಸವರ್ಣದೀರ್ಘಸಂಧಿ

(ಸಿ) ಲೋಪಸಂಧಿ (ಡಿ) ಗುಣಸಂಧಿ

**4. 'ಶರಣರನ್ನು'** ಪದದಲ್ಲಿನ ವಿಭಕ್ತಿ ಹೆಸರು;

(ಎ) ಪ್ರಥಮ (ಬಿ) ದ್ವಿತೀಯಾ

(ಸಿ) ತೃತೀಯಾ (ಡಿ) ಚತುರ್ಥಿ

**5. ವರ್ತಮಾನ ಕಾಲದ ಕ್ರಿಯಾಪದ**

(ಎ) ತಿನ್ನುತ್ತೇನೆ (ಬಿ) ತಿಂದನು

(ಸಿ) ತಿನ್ನುವೆನು (ಡಿ) ತಿಂದರು

**6. ಶಿಲ್ಪಿಗಳು ಶಿಲೆಗಳಿಂದ ಗುಡಿಯನ್ನು ಕಟ್ಟಿದರು** – ಈ ವಾಕ್ಯದಲ್ಲಿರುವ ಕ್ರಿಯಾಪದ

(ಎ) ಶಿಲ್ಪಿಗಳು (ಬಿ) ಶಿಲೆಗಳಿಂದ

(ಸಿ) ಗುಡಿಯನ್ನು (ಡಿ) ಕಟ್ಟಿದರು

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ :** 4 X 1 = 4

**7.** ಮ್ಯಾಲೆ : ಮೇಲೆ : : ಹ್ಯಾಂಗ : ______________

8. ನಂಬಿಕೆ : ಅಪನಂಬಿಕೆ : : ಸ್ಥಾವರ : ___________________

9. ಧುರ : ಕಾಳಗ : : ಘೃತ : ________________

10. ಸಕ್ಕದ : ಸಂಸ್ಕೃತ : : ಚದುರ : ____________

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 7 X 1 = 7

11. ಜಯಪುರದ ಸಮೀಪದಲ್ಲಿರುವ ಖಗೋಳ ವಿಜ್ಞಾನದ ಪರಿಶೀಲನಾಲಯದ ಹೆಸರೇನು ?
12. ರಾಜನಿಗೆ ಮಹತ್ತರವಾದ ಶ್ರೇಯಸ್ಸನ್ನು ತಂದುಕೊಡಬಲ್ಲವನು ಯಾರು ?
13. ಅಧಿಕಾರಿಗಳ ಕರ್ತವ್ಯ ಯಾವುದೆಂದು ಬಸವಣ್ಣನವರು ಹೇಳಿದರು ?
14. ಸ್ವಾಮಿಯವರು ನುಡಿಸುತ್ತಿದ್ದ ಸಂಗೀತವಾದ್ಯ ಯಾವುದು ?
15. ಅಭಯರುಚಿಯ ಸಹೋದರಿಯ ಹೆಸರೇನು ?
16. ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು ಎಂದು ಗಾನರಾಣಿಯರು ಯಾರಿಗೆ ಕೇಳಿದರು ?
17. ತಿಪ್ಪಣ್ಣನನ್ನು ಗಪ್ಪನೆ ಬಲವಾಗಿ ಹಿಡಿದುಕೊಂಡವರು ಯಾರು ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 10 X 2 = 20

18. ದೂತನು ಹೇಗಿರಬೇಕು ?
19. ರಾಧಾಕೃಷ್ಣನ್ ಅವರ ವೇಷಭೂಷಣಗಳ ಬಗ್ಗೆ ಬರೆಯಿರಿ.
20. ಶಿಕ್ಷಣದ ಮಹತ್ತ್ವವನ್ನು ಕುರಿತು ರಾಧಾಕೃಷ್ಣನ್ ಅವರು ಏನು ಹೇಳಿದ್ದಾರೆ ?
21. ಸ್ವಾಮಿಯವರ ಸಂಶೋಧನೆಯ ಆಸಕ್ತಿ ಹೇಗಿತ್ತು ?
22. ಕನ್ನಡಿಗರ ವಿಶೇಷತೆಯನ್ನು ಶ್ರೀ ವಿಜಯ ಹೇಗೆ ಸಾರಿದ್ದಾನೆ ?
23. ಕನ್ನಡ ಮತ್ತು ಸಂಸ್ಕೃತ ಭಾಷಾ ಬಳಕೆಯ ಬಗ್ಗೆ ನಯಸೇನ ಏನು ಹೇಳುತ್ತಾನೆ ?
24. ಭೂಮಿ-ಆಕಾಶದಲ್ಲಿ ಪುಟ್ಟಹಕ್ಕಿಗೆ ಯಾರ ಭಯವಿದೆ?
25. ಶಬಲೆ ಹೇಳಿದಂತೆ ಪೋರ್ಚುಗೀಸರು ಯಾವ ಕಾರಣಗಳಿಗಾಗಿ ಯುದ್ಧಕ್ಕೆ ಸಿದ್ಧರಾಗಿದ್ದರು ?
26. ಬೇರೆ ಬೇರೆ ಭಾಷಿಕರು ತನ್ನ ಕೃತಿಯನ್ನು ಹೇಗೆ ಹೊಗಳಬೇಕೆಂದು ಕವಿ ಬಯಸುವನು ?
27. ನನ್ನಾಸೆ ಕವನದಲ್ಲಿ ಕವಯಿತ್ರಿಯವರ ಆಸೆಗಳೇನು ?

**V. ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ, ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :**

28. ಶಿವರಾಮ ಕಾರಾಂತ 2 X 3 = 6
29. ರಾಘವಾಂಕ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** 1 X 3 = 3

30. ಮಲ್ಲಿಗೆಯಲ್ಲದೆ ಸಂಪಗೆ
ಯಲ್ಲದೆ ದಾಳಿಂಬಮಲ್ಲದೊಪ್ಪುವ ಚೆಂದಂ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ :** 1 X 3 = 3

31. "ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು"

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ :**

32. ಅತಿಯಾಸೆ ಗತಿಗೇಡು 1 X 3 = 3

ಅಥವಾ

ಆರೋಗ್ಯವೇ ಭಾಗ್ಯ

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :** 6 X 3 = 18

33. "ಸೆರೆಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮ ಅಲ್ಲ"
34. "ನಿನ್ನ ಮಾತು ಯಾರು ತಗದು ಹಾಕತಾರಪಾ, ಬಸಣ್ಣ?"
35. "ನೀನತ್ಯಂತ ಕರುಣಿ "
36. "ಮುದ್ದು ಮರಿಗಳ ಮಧುರ ಸದ್ದು ಕೇಳಿ"
37. "ತೃಣವ ಮುರಿವುದಕ್ಕೆ ಕೊಡಲಿಯು ಬೇಕೆ"

38 "ಬಲಿಯನಿತ್ತೊಡೆ ಮುನಿವೆಂ"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 X 4 = 4

39. ನವಭಾವ ______________________________

______________________________

______________________________

ವೀರಧ್ವನಿಯೇರಬೇಕು

**ಅಥವಾ**

ಜಾತಿ–ಕುಲ ______________________________

______________________________

______________________________

________________ಗುಡುಗಬೇಕು

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :**

40. ಹೇಮಂತ ಋತುರಾಜನಿಳೆಗೆ ಬಂದಿಳಿವಂದು 1 X 4 = 4
ಹೂವಿಲ್ಲ ಹಸುರಿಲ್ಲ ಚಿಗುರೆಲೆಗಳಿಲ್ಲ.
ದುಂಬಿಗಳ ದನಿಯಿಲ್ಲ ಹಕ್ಕಿಗಳ ಹಾಡಿಲ್ಲ
ಕುಸುಮ ಗಂಧವ ತರುವ ಮರುತನಿಲ್ಲ.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 1 X 4 = 4

41. **“** ವೀರಗಾಸೆ ಮತ್ತು ವೀರಭದ್ರನ ಕುಣಿತ ವಿಭಿನ್ನವಾಗಿವೆ **”** ಎಂಬುದನ್ನು ಸಮರ್ಥಿಸಿ ಬರೆಯಿರಿ

**ಅಥವಾ**

ಡೊಳ್ಳು ಬಾರಿಸುವ ಕಲಾವಿದರ ವೇಷಭೂಷಣಗಳು ಹೇಗಿರುತ್ತವೆ ?

42. **‘**ಗುರುಕರುಣೆ**’** ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಅಥವಾ**

ಬಿದಿರಿನ ಮಹತ್ವವನ್ನು ಸಂತ ಶಿಶುನಾಳ ಷರೀಫರು ಹೇಗೆ ಕೊಂಡಾಡಿದ್ದಾರೆ ? ವಿವರಿಸಿ

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**1 X 4 = 4(2+2)

ಮನುಷ್ಯನ ಮನಸ್ಸು ಈಡೇರದ, ತುಚ್ಛವಾದ ಆಸೆಗಳ ಸುಳಿಗೆ ಸಿಲುಕಿ ನೆಲೆಯೇ ಇಲ್ಲದೇ ಅಲೆದಾಡುತ್ತದೆ. ಇಂತಹ ಜೀವನವು ಅತ್ಯಂತ ಕನಿಷ್ಠವಾದುದು. ಮನುಷ್ಯನಿಗೆ ತನ್ನ ಜೀವನದಲ್ಲಿ ಒಂದು ಗುರಿ ಇರಬೇಕು. ಮೊಗ್ಗಿನಂತೆ ಇರುವ ಗುರಿಯು ಆತನ ಶ್ರಮ, ಶ್ರದ್ಧೆಗಳಿಂದ ಹೂವಾಗಿ ಅರಳಿ ಫಲವನ್ನು ಪಡೆದು ಬಾಳಿನ ಅಂತ್ಯ ಕಾಣಬೇಕು. ತಾವರೆ ಕೆಸರಿನಲ್ಲಿ ಹುಟ್ಟಿದರೂ ಆಕಾಶದಲ್ಲಿ ಇರುವ ಸೂರ್ಯನ ಕಿರಣಗಳನ್ನು ನೋಡಿ ತಾನು ಅರಳಿ ಸುಂದರವಾಗಿ ಕಾಣಿಸುತ್ತದೆ. ಈ ರೀತಿಯ ಧ್ಯೇಯವನ್ನು ಇಟ್ಟುಕೊಂಡು ದುಡಿಮೆಗೆ ಶರಣಾಗುತ್ತ ಬದ್ಧತೆಯಿಂದ ಕೆಲಸ ಮಾಡಬೇಕು ಆಗ ಜೀವನದಲ್ಲಿ ಸಾರ್ಥಕತೆ ಸಿಗುತ್ತದೆ. ಒಂದು ಬಾಣಕ್ಕೆ ಒಂದೆ ಗುರಿ ಅನೇಕ ಗುರಿಗಳು ಇರಲು ಸಾಧ್ಯವಿಲ್ಲ. ಒಂದು ದೇಹದಲ್ಲಿ ಒಂದೇ ಆತ್ಮ ಇರುತ್ತದೆ. ಹಾಗಾಗಿ ಒಂದು ಜೀವನದಲ್ಲಿ ಹಲವು ಗುರಿಗಳು ಏಕೆ? ಒಂದೇ ದೊಡ್ಡ ಗುರಿಯನ್ನು ಇಟ್ಟುಕೊಂಡು ಹಗಲುರಾತ್ರಿ ಗುರಿ ಸಾಧನೆಗೆ ಹೋರಾಡು. ‘ಜನತಾ ಜನಾರ್ಧನ’ ಎಂಬಂತೆ ಮನುಷ್ಯನಲ್ಲಿ ನಾರಾಯಣನನ್ನು ಕಾಣಬೇಕು. ಈ ಭೂಲೋಕದಲ್ಲಿ ಸ್ವರ್ಗದ ಸೌಂದರ್ಯ, ಸಂಪತ್ತನ್ನು ಕಂಡುಕೊಳ್ಳುತ್ತಾ, ಸ್ವಾರ್ಥಕ್ಕಾಗಿ ಬದುಕದೆ, ಪರರ ಸುಖಕ್ಕಾಗಿ, ಪರರಿಗೆ ಉಪಕಾರ ಮಾಡುತ್ತ, ಬದುಕುವುದೆ, ಪರರ ಸುಖಕ್ಕಾಗಿ ಪರರಿಗೆ ಉಪಕಾರ ಮಾಡುತ್ತ, ಬದುಕುವುದೆ ನಿಜವಾದ ಜೀವನ. ಅದನ್ನು ಬಿಟ್ಟು ಸ್ವಾರ್ಥದಿಂದ ಸಂಕುಚಿತ ಮನೋಭಾವವನ್ನು ಹೊಂದಿದರೆ ಅದು ನಮಗೆ ಅಪಕೀರ್ತಿಯನ್ನು ಉಂಟು ಮಾಡುತ್ತದೆ.

**ಪ್ರಶ್ನೆಗಳು :**

43. ಅ) ಮನುಷ್ಯನ ಜೀವನದಲ್ಲಿ ಸಾರ್ಥಕತೆ ಯಾವಾಗ ಸಿಗುತ್ತದೆ.

ಆ) ಈ ಲೇಖನದ ಪ್ರಕಾರ ನಿಜವಾದ ಜೀವನ ಎಂದರೆ ಯಾವುದು ?

## XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 X 5 = 5

44. ನಿಮ್ಮನ್ನು ಬಾಗಲಕೋಟೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಸುರಭಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ವಿಜ್ಞಾನ ದಿನಾಚರಣೆಯನ್ನು ಕುರಿತು ಉಡುಪಿಯ ಶ್ರೀರಾಮಕೃಷ್ಣ ಆಶ್ರಮ ಶಾಲೆಯಲ್ಲಿ 9ನೇ ತರಗತಿ ಓದುತ್ತಿರುವ ಸಮಂತ ಎನ್ನುವ ನಿಮ್ಮ ಸ್ನೇಹಿತ/ತೆಗೊಂದು ಪತ್ರಬರೆಯಿರಿ.

**ಅಥವಾ**

ನಿಮ್ಮನ್ನು ವಿಜಯನಗರ ಜಿಲ್ಲೆಯ ಅಂಜನಾದ್ರಿಬೆಟ್ಟದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ವಿಭುಸುತ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಶಾಲಾ ವಾರ್ಷಿಕೋತ್ಸವಕ್ಕೆ ಆಗಮಿಸುವಂತೆ ಕೋರಿ ನಿಮ್ಮ ಜಿಲ್ಲಾಧಿಕಾರಿಗಳಿಗೊಂದು ಪತ್ರ ಬರೆಯಿರಿ.

## XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :

1 X 5 = 5

45. ಮೊಬೈಲ್ ಬಳಕೆಯ ಪ್ರಯೋಜನಗಳು ಮತ್ತು ದುಷ್ಪರಿಣಾಮಗಳು

**ಅಥವಾ**

ರಾಷ್ಟ್ರೀಯ ಹಬ್ಬಗಳ ಮಹತ್ತ್ವ